೧೩೩೬೬ ಮು (216)
4/ಕ
17/04/24

# ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಡಿ. ಎಸ್. ಅರುಣ್ .ರವರ ನಿಯಮ 72ರ ಅಡಿಯಲ್ಲಿ ಗಮನ ಸೆಳೆಯುವ ಸೂಚನೆ ಸಂಖ್ಯೆ 216ಕ್ಕೆ ಉತ್ತರಿಸುವ ಕುರಿತು.

**ಪ್ರಶ್ನೆ:**

ರಾಜ್ಯದಲ್ಲಿ ಹಲವಾರು ಕಡೆಗಳಲ್ಲಿ ಜಲಜೀವನ್ ಮಿಷನ್ ಯೋಜನೆಯಡಿ ಕೈಗೊಳ್ಳಲಾಗಿರುವ ಕಾಮಗಾರಿಗಳು ತೀರಾ ಕಳಪೆಯಾಗಿದ್ದು, ಇಂದಿಗೂ ಜನರು ಕುಡಿಯುವ ನೀರಿನ ಲಭ್ಯತೆ ಇಲ್ಲದೇ ಪರಿತಪಿಸುತ್ತಿದ್ದಾರೆ. ನೀರು ಪೂರೈಸುವ ಕೊಳವೆ ಮಾರ್ಗಗಳು ಶಿಥಿಲಗೊಂಡಿರುತ್ತವೆ. ದೇಶದ ಪ್ರಧಾನಮಂತ್ರಿಗಳ ಕನಸಿನ ಕೂಸಿನ ಸದರಿ ಯೋಜನೆಯು ಸಮರ್ಪಕವಾಗಿ ಜಾರಿಯಾಗದೇ ಜನಸಾಮಾನ್ಯರಿಗೆ ನಿರೀಕ್ಷಿತ ಮಟ್ಟದಲ್ಲಿ ಸದರಿ ಯೋಜನೆಯ ಫಲ ಸಿಗದೇ ಇದ್ದು, ಇದಕ್ಕೆ ಕಾರಣರಾದ ಅಧಿಕಾರಿಗಳ ಮತ್ತು ಗುತ್ತಿದಾರರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವ ಕುರಿತು ಚರ್ಚೆ ನಡೆಸಲು ನಿಯಮ 72ರ ಅಡಿಯಲ್ಲಿ ಗಮನ ಸೆಳೆಯುವ ಬಯಸುತ್ತೇನೆ.

**ಉತ್ತರ:**

ಜೀವನ್ ಮಿಷನ್ ಯೋಜನೆಯಡಿ ಕಳಪೆ ಕಾಮಗಾರಿಗಳ ಕುರಿತು ಕೆಲವು ದೂರುಗಳು ಸ್ವೀಕೃತವಾಗುತ್ತಿದ್ದು, ದೂರಿನ ಕುರಿತು ರಾಜ್ಯ ಗುಣಮಟ್ಟ ನಿಯಂತ್ರಣ (SQM) State Quality Monitors, National WASH Experts, Independent Verification Agency(IVA) ಹಾಗೂ ವಿಶೇಷ ತಂಡಗಳ ಮೂಲಕ ತಪಾಸಣೆಗೆ ಒಳಪಡಿಸಲಾಗುತ್ತಿದೆ . ಅಲ್ಲದೇ ಖಾಸಗಿ ಸಂಸ್ಥೆಯಾದ M/s Bureau Veritas ನಿಂದ ಮಾದರಿಯಾಗಿ ಕಾಮಗಾರಿಗಳ ಗುಣಮಟ್ಟ ಪರಿಶೀಲಿಸಲಾಗಿದ್ದು, ಕಾಮಗಾರಿಗಳ ಗುಣಮಟ್ಟವನ್ನು ಕಾಪಾಡಲು ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ. ಸದರಿಯವರ ವರದಿಯಲ್ಲಿ ನ್ಯೂನ್ಯತೆಗಳು ಕಂಡುಬಂದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ಹಾಗೂ ಕಾಮಗಾರಿಗಳಲ್ಲಿನ ಗುತ್ತಿಗೆದಾರರ ಮೇಲೆ ನಿಯಮಾನುಸಾರ ಸೂಕ್ತ ಕ್ರಮ ಜರುಗಿಸಲಾಗುತ್ತಿದೆ ಹಾಗೂ ನ್ಯೂನ್ಯತೆಗಳನ್ನು ಸರಿಪಡಿಸಲಾಗುತ್ತಿದೆ.

ಕಾಮಗಾರಿಗಳ ಗುಣಮಟ್ಟಕ್ಕೆ ಸಂಬಂಧಿಸಿದಂತೆ ಯೋಜನೆಯಲ್ಲಿ ಬಳಸುವ ಎಲ್ಲಾ HDPE ಪೈಪ್ ಗಳನ್ನು M/S Central Institute of Petrochemicals Engineering & Technology (CIPET) ಸಂಸ್ಥೆಯ ಪ್ರಯೋಗಾಲಯದಲ್ಲಿ ಅಗತ್ಯವಿರುವ ಗುಣಮಟ್ಟಗಳನ್ನು ಪರೀಕ್ಷಿಸಿ ಖಚಿತಪಡಿಸಿದ ನಂತರ ಕಾಮಗಾರಿಗಳಲ್ಲಿ ಉಪಯೋಗಿಸಲಾಗಿರುತ್ತದೆ. ಪೈಪ್ ಗಳನ್ನು ಕೆಲವು ಗ್ರಾಮಗಳಲ್ಲಿ ಅಳವಡಿಸುವ ಮಾರ್ಗದಲ್ಲಿ ಭೂಮಟ್ಟದಿಂದ ಕಡಿಮೆ ಆಳದಲ್ಲಿ/ಭೂಮಟ್ಟದಲ್ಲಿ ಗಡಸು ಕಲ್ಲಿನ (Hard Rock) ಪದರಗಳು ದೊರೆತಿದ್ದು, ಅಂತಹ ಸ್ಥಳಗಳಲ್ಲಿ ಪೈಪಗಳನ್ನು ಕಡಿಮೆ ಆಳದಲ್ಲಿ ಅಳವಡಿಸಲಾಗಿದ್ದು ಸದರಿ ಸ್ಥಳಗಳಲ್ಲಿ ನೀರಿನ ಕೊಳವೆಗಳ ರಕ್ಷಣೆಗಾಗಿ GI Pipe Encasing ಮಾಡಿ ಸರಿಪಡಿಸಲಾಗುತ್ತಿದೆ.

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮತ್ತು
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು